

ಕಲೆ: ನಾಗೇಶ ಹೆಗಡೆ

# ಗಜಲ್

ಹೃದಯ ಎಷ್ಟು ಬಿಕ್ಕಿರಬಹುದು ಕನಸುಗಳು ಸಾಯುವಾಗ
ಸತ್ತು ಎಷ್ಟು ಬದುಕಿರಬಹುದು ಮನಸುಗಳು ಬಾಡುವಾಗ

ಎಷ್ಟೋ ಕಂಬನಿಗಳು ಕರಕಲಾಗಿವೆ ಈ ನಗೆರೇಖೆಗಳ ಹಿಂದೆ
ಮಾತು ಮೌನವಾಗಿರಬಹುದು ನೋವುಗಳು ಸುಡುವಾಗ

ತುಂಬಿದ ಸಭೆಯಲ್ಲೂ ಈ ಹೃದಯ ಏಕಾಂಗಿ ಯಾಕೊ ಇಲ್ಲಿ
ಮೌನ ಮಾತಾಡಿರಬಹುದು ಮುಖಭಾವಗಳು ಕಾಡುವಾಗ

ಯಾರೊಂದಿಗೆ ಹಂಚಿಕೊಳ್ಳಬೇಕು ಚೂರಾದ ಬಿಂಬಗಳನು
ಇಲ್ಲಿ ಆಪ್ತರೇ ಕಲ್ಲೆಸೆದಿರಬಹುದು ರೂಪಗಳು ಕೂಡುವಾಗ

ಶಬ್ದವೇ ಬರುವುದಿಲ್ಲ ಮನಸುಗಳು ಮುರಿಯುವಾಗ ಏಕೆ
ಕಿವಿಗಳೇ ಕಿವುಡಾಗಿರಬಹುದು ಈ ಕಣ್ಣುಗಳು ಅಳುವಾಗ

● ಉಮರ್ ದೇವಮನಿ ಮಾನ್ವಿ